CAMPCO Ltd., Bangalore.

8. Smt. N. Nagambika Devi IAS
Assistant Commissioner,
Madhugiri Sub.Division, Madhugiri

9. Sri. G. Kumar Naik IAS
Assistant Commissioner, Hunsur Sub.Division, Hunsur.

ಹಿರೇಕೆರೂರಿನಲ್ಲಿ ನ್ಯಾಯಾಲಯ ಕಟ್ಟಡದ ಕಾಮಗಾರಿ ಕೆಲಸ

115(672) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೇರೂರು)

ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರಿನಲ್ಲಿ ನಿರ್ಮಾಣವಾಗುತ್ತಿರುವ ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳ ಕಟ್ಟಡದ ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು;

ಆ) ಸದರೀ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದಲ್ಲಿ ಈ ವಿಳಂಬಕ್ಕೆ ಕಾರಣಗಳೇನು;

ಈ) ಅನಾವಶ್ಯಕ ವಿಳಂಬದಿಂದಾಗಿ ಸದರೀ ಕಾಮಗಾರಿಗೆ ಖರ್ಚಾಗಲಿರುವ ಹೆಚ್ಚಿನ ಹಣವೆಷ್ಟು ?

ಶ್ರೀ. ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) 1) ಕಾಮಗಾರಿಯನ್ನು ಫೆಬ್ರುವರಿ 1989ರಲ್ಲಿ ಪ್ರಾರಂಭಿಸಲಾಯಿತು.

2) ಮಳೆಗಾಲ ಹೊರತುಪಡಿಸಿ 24 ತಿಂಗಳ ಅವಧಿ.

ಆ) ಬಂದಿದೆ

ಇ) ವಿಧಾನ ಸಭೆಯ ಅಂದಿನ ಮಾನ್ಯ ಅಧ್ಯಕ್ಷರು ಕಟ್ಟಡದ ಓರಿಯಂಟೇಶನ್ ಕೆಲವು ಬದಲಾವಣೆಗಳನ್ನು ಸೂಚಿಸಿದ್ದರ ಮೇರೆಗೆ ಅದಕ್ಕೆ ಸೂಕ್ತ ನಕ್ಷೆ ಸಿದ್ಧಪಡಿಸುವಲ್ಲಿ ಮತ್ತು ನ್ಯಾಯಾಲಯದ ರಿಜಿಸ್ಟ್ರಾರ್‌ರವರಿಂದ ಒಪ್ಪಿಗೆ ಪಡೆಯುವಲ್ಲಿ 9 ತಿಂಗಳ ಅವಧಿ ಕಳೆದಿದ್ದರಿಂದ ಹಾಗೂ ಗುತ್ತಿಗೆದಾರರು ಹೊಸ ಬದಲಾವಣೆಯ ಕಾಮಗಾರಿಯನ್ನು ಹಳೆಯ ಗುತ್ತಿಗೆದರದಲ್ಲಿ ಮುಂದುವರಿಸಲು ಒಪ್ಪಲಿಲ್ಲ. ಆದ್ದರಿಂದ ಅವರ ಗುತ್ತಿಗೆಯನ್ನು ಮೊಟಕುಗೊಳಿಸಿ ಮರು ಗುತ್ತಿಗೆ ಸವಾಲಿಗೆ ಸೂಕ್ತ ಗುತ್ತಿಗೆದಾರರು ಲಭ್ಯವಿಲ್ಲದ ಕಾರಣದಿಂದಾಗಿ ವಿಳಂಬವಾಗಿರುತ್ತೆ. ಈಗ ಇಲಾಖಾ ವತಿಯಿಂದ ಕಾಮಗಾರಿಯನ್ನು ಮುಂದುವರೆಸಿ, ಪ್ರಗತಿಯಲ್ಲಿದೆ.

ಈ) ಸುಮಾರು 17.00 ಲಕ್ಷ.ರೂಗಳು.

ರಾಜ್ಯದಲ್ಲಿರುವ ಆರೋಗ್ಯ ಕೇಂದ್ರಗಳಿಗೆ ಹಾಗೂ ಆಸ್ಪತ್ರೆಗಳಿಗೆ ಔಷಧಿ ಸರಬರಾಜು

116(674) ಶ್ರೀ. ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಆಸ್ಪತ್ರೆಗಳಿಗೆ ಔಷಧಿ ಪೂರೈಸಲು ಒದಗಿಸಿದ ಹಣ ಮತ್ತು ಖರ್ಚಾದ ಹಣವೆಷ್ಟು;

ಆ) 1992–93ನೇ ಸಾಲಿನಲ್ಲಿ ವಿವಿಧ ಆಸ್ಪತ್ರೆಗಳಿಗೆ ವಿತರಿಸಿದ ಔಷಧಿಗಳ ಬೆಲೆ ಎಷ್ಟು ? ಹಾಗೂ ವಿತರಿಸಿದ ದಿನಾಂಕವನ್ನು ತಿಳಿಸುವುದು.

ಇ) ಔಷಧಿ ಪೂರೈಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣವೇನು ? ಈ ವಿಳಂಬವನ್ನು ತಪ್ಪಿಸಲು ಸರ್ಕಾರದ ಕ್ರಮಗಳೇನು;

ಈ) ಆಯವ್ಯಯದಲ್ಲಿ ಒದಗಿಸಿರುವ ಹಣವು ಔಷಧಿ ಪೂರೈಕೆಯ ಅವಶ್ಯಕತೆಗಿಂತ ಕಡಿಮೆ ಇರುವುದನ್ನು ಸರ್ಕಾರವು ಗಮನಿಸಿದೆಯೇ ? ಹಾಗಿದ್ದಲ್ಲಿ ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) 1992–93ನೇ ಸಾಲಿನಲ್ಲಿ ಸರ್ಕಾರಿ ಔಷಧಿ ಮಳಿಗೆಗೆ ಔಷಧಿಗಳ ಖರೀದಿಗಾಗಿ ಒದಗಿಸಲಾಗಿರುವ ಹಣ ರೂ. 14,70,38,865–00 (ಜಿಲ್ಲಾಪರಿಷತ್‌ಗೆ ಒದಗಿಸಿರುವ ಅನುದಾನವನ್ನು ಹೊರತುಪಡಿಸಿ).

ಇದುವರೆವಿಗೂ ಅಂದರೆ, ದಿನಾಂಕ 19–12 –92 ರವರೆಗೆ ಖರ್ಚಾದ ಹಣ ರೂ. 5,64,80,119–00.

ಆ) 1992–93ನೇ ಸಾಲಿನಲ್ಲಿ ಅಂದರೆ, ದಿನಾಂಕ 1–4–92 ರಿಂದ ದಿನಾಂಕ 19–12–92 ರವರೆಗೆ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಸರ್ಕಾರಿ ಔಷಧಿ ಮಳಿಗೆಯಿಂದ ಪೂರೈಸಲಾದ ಔಷಧಿಗಳ ಮೊತ್ತ ರೂ. 5,50,09,276–00

ಇ) ಸಪ್ಲೈ ಷೆಡ್ಯೂಲ್ ಪ್ರಕಾರ ಔಷಧಿಗಳನ್ನು ಪೂರೈಸಲಾಗುತ್ತಿದೆ.

ಸಂಬಂಧಿಸಿದ ಸಂಸ್ಥೆಗಳಿಂದ ಸರ್ಕಾರಿ ಔಷಧಿ ಮಳಿಗೆಗೆ ಔಷಧಿಗಳ ಪೂರೈಕೆಗಾಗಿ ಬೇಡಿಕೆ ಪಟ್ಟಿಯು ತಡವಾಗಿ ಬರುವುದರಿಂದ ಅಂತಹ ಸಂಸ್ಥೆಗಳಿಗೆ ಔಷಧಿಗಳ ಪೂರೈಕೆಯಲ್ಲಿ ವಿಳಂಬವಾಗಿರುತ್ತದೆ. ಸಂಬಂಧಪಟ್ಟ ಸಂಸ್ಥೆಗಳಿಗೆ ಮತ್ತು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ, ಬೇಡಿಕೆ ಪಟ್ಟಿಯನ್ನು ಸಕಾಲದಲ್ಲಿ ಕಳುಹಿಸುವಂತೆ ಸೂಚನೆ ನೀಡಲಾಗಿದೆ.

ಡಿಸೆಂಬರ್ 1992ರಲ್ಲಿ ಪ್ಯಾಕೇಜ್ ಇಂಡೆಂಟ್ಸ್‌ಗೆ ಮಂಜೂರಾತಿ ನೀಡಲಾಗಿದ್ದು, ಮಾರ್ಚ್ 1993ರ ಒಳಗಾಗಿ ಔಷಧಿಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಆಯವ್ಯಯ ಅವಕಾಶ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸರ್ಕಾರವು ಸಮಿತಿಯೊಂದನ್ನು ರಚಿಸಿದೆ ಮತ್ತು ಆ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಹಿರೇಕೆರೂರು ತಾಲ್ಲೂಕು ಕೋಡೆಗ್ಗಾಮದಲ್ಲಿ ಆರಕ್ಷಕ ಠಾಣೆ ತೆರೆಯುವುದು

117 (675) ಶ್ರೀ. ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)